## ಪ್ರಾರ್ಥನೆ

### ಉಪನಿಷತ್ತುಗಳಿಂದ

ನಿಷ್ಕಲಂ ನಿಷ್ಕ್ರಿಯಂ ಶಾಂತಂ ನಿರವದ್ಯಂ ನಿರಂಜನಂ ।
ಅಮೃತಸ್ಯ ಪರಂ ಸೇತುಂ ದಗ್ಧೇಂಧನಮಿವಾನಲಮ್ ॥

ನಿರವಯವನೂ, ನಿಷ್ಕ್ರಿಯನೂ, ಶಾಂತನೂ, ಅನಿಂದ್ಯನೂ, ನಿರಂಜನನೂ, ಅಮೃತತ್ತ್ವಕ್ಕೆ ಶ್ರೇಷ್ಠವಾದ ಸೇತುವೆಯಂತೆ ಇರುವವನೂ, ಕಟ್ಟಿಗೆಯನ್ನು ಸಂಪೂರ್ಣವಾಗಿ ಸುಟ್ಟಿರುವ ಅಗ್ನಿಯಂತೆ ಪ್ರಕಾಶಮಾನನೂ ಆದ ದೇವನನ್ನು ಮುಮುಕ್ಷುವಾದ ನಾನು ಶರಣು ಹೊಂದುತ್ತೇನೆ. (ಶ್ವೇತಾಶ್ವತರ ಉಪನಿಷತ್ತು, ೬. ೧೯)

ವಿಶ್ವೇಶ್ವರ ನಮಸ್ತುಭ್ಯಂ ವಿಶ್ವಾತ್ಮಾ ವಿಶ್ವಕರ್ಮಕೃತ್ ।
ವಿಶ್ವಭುಗ್ವಿಶ್ವಮಾಯುಸ್ತ್ವಂ ವಿಶ್ವಕ್ರೀಡಾರತಿಪ್ರಭುಃ ॥

ಭಗವಂತನೇ, ನೀನು ಇಡೀ ವಿಶ್ವಕ್ಕೆ ಒಡೆಯನಾಗಿರುವೆ. ಈ ವಿಶ್ವದ ಆತ್ಮ ಕೂಡ ನೀನೇ. ವಿಶ್ವದ ಕರ್ತಾರನೂ ನೀನೇ. ವಿಶ್ವದ ಅನುಭವಗಳೆಲ್ಲ ನಿನ್ನ ಅನುಭವಗಳೇ ಆಗಿವೆ. ವಿಶ್ವಜೀವನನು ನೀನು. ನೀನು ವಿಶ್ವದ ರೂಪದಲ್ಲಿ ನಿನ್ನ ಲೀಲೆಯನ್ನಾಡುವೆ. ಅಂಥ ಪ್ರಭುವಾದ ನಿನಗೆ ನಮಸ್ಕಾರಗಳು. (ಮೈತ್ರಾಯಣಿ ಉಪನಿಷತ್ತು, ೪.೧೪)

ನಮಃ ಶಾಂತಾತ್ಮನೇ ತುಭ್ಯಂ ನಮೋ ಗುಹ್ಯತಮಾಯ ಚ ।
ಅಚಿಂತ್ಯಾಯಾಪ್ರಮೇಯಾಯ ಅನಾದಿನಿಧನಾಯ ಚ ॥

ಪ್ರಭು, ನೀನು ಸ್ವಭಾವತಃ ಶಾಂತಸ್ವರೂಪಿಯು. ನಿನ್ನ ಸ್ವರೂಪವು ಅತ್ಯಂತ ಗುಹ್ಯವಾದುದು. ನೀನು ಎಲ್ಲ ಬಗೆಯ ಆಲೋಚನೆಗಳು ಮತ್ತು ಸೀಮಿತತೆಗಳ ಎಲ್ಲೆಯನ್ನು ಮೀರಿಹೋಗಿರುವವನು. ನಿನಗೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅಂಥ ನಿನಗೆ ನಮಸ್ಕಾರಗಳು.
(ಮೈತ್ರಾಯಣಿ ಉಪನಿಷತ್ತು, ೪.೧೫)

ತುಭ್ಯಂ ಮಹ್ಯಮನಂತಾಯ ಮಹ್ಯಂ ತುಭ್ಯಂ ಚಿದಾತ್ಮನೇ।
ನಮಸ್ತುಭ್ಯಂ ಪರೇಶಾಯ ನಮೋ ಮಹ್ಯಂ ಶಿವಾಯ ಚ ॥

ನೀನೂ ಅನಂತಸ್ವರೂಪಿಯು, ನಾನೂ ಅನಂತಸ್ವರೂಪನು. ನೀನೂ ಚಿತ್ಸ್ವರೂಪನು, ನಾನೂ ಚಿತ್ಸ್ವರೂಪನು. ನೀನಾದರೋ ಪರಮೇಶ್ವರನು. ನಾನೂ ಕೂಡ ಸ್ವಭಾವತಃ ಶಿವನು. ಆದ್ದರಿಂದ ನಿನಗೂ ನಮಸ್ಕಾರ, ನನಗೂ ಕೂಡ ನಮಸ್ಕಾರ (ಜೀವಿ ಮತ್ತು ಈಶ್ವರ –ಇಬ್ಬರ ಸ್ವರೂಪವೂ ಚೈತನ್ಯ ಎಂದರ್ಥ). (ಸಂನ್ಯಾಸ ಉಪನಿಷತ್ತು, ೩೨)

ಗಮಾಗಮಸ್ಥಂ ಗಮನಾದಿಶೂನ್ಯಂ
ಚಿದ್ರೂಪದೀಪಂ ತಿಮಿರಾಂಧನಾಶತ್ ।
ಪಶ್ಯಾಮಿ ತಂ ಸರ್ವಜನಾಂತರಸ್ಥಂ
ನಮಾಮಿ ಹಂಸಂ ಪರಮಾತ್ಮರೂಪಂ ॥

ಭಗವಂತನು ಚರಾಚರಪ್ರಾಣಿಗಳೆಲ್ಲರಲ್ಲಿ ಇರುವ, ಯಾವ ಚಲನೆಯೂ ಇಲ್ಲದ ದೇವನು. ಅವನು ಚೈತನ್ಯದೀಪ. ಹೀಗಾಗಿ ಅಜ್ಞಾನದ ಅಂಧಕಾರವನ್ನು ನಾಶಮಾಡುವವನು. ಎಲ್ಲ ಜನರ ಅಂತರ್ಯಾಮಿಯಾಗಿ ಇರುವವನು. ಅಂತಹ ಪರಮಾತ್ಮ ಸ್ವರೂಪನನ್ನು ನಾನು ನಮಸ್ಕರಿಸುತ್ತೇನೆ. (ಯೋಗಶಿಖೋಪನಿಷತ್ತು, ೬.೨೦)

## ಸೂಕ್ತಿಪ್ರಭ

### ಗುರು

**ಆ**ಧ್ಯಾತ್ಮಿಕ ಮಾರ್ಗವನ್ನು ಅನುಸರಿಸುವುದು ಬಹಳ ಕಠಿಣ. ಒಬ್ಬ ವ್ಯಕ್ತಿ ಅದೆಷ್ಟೇ ಬುದ್ಧಿವಂತನಾದರೂ, ಸಾಕ್ಷಾತ್ಕಾರ ಪಡೆದ ಗುರುವಿನ ಸಹಾಯವಿಲ್ಲದೆ ಹೋದರೆ, ಅವನು ಆ ಮಾರ್ಗದಲ್ಲಿ ಎಡವಬಹುದು.
–ಸ್ವಾಮಿ ಬ್ರಹ್ಮಾನಂದ

**ನಿ**ಜವಾದ ಗುರುವು ಶಿಷ್ಯನಿಗೆ ಮಂತ್ರದೀಕ್ಷೆ ಕೊಡುವ ಸಮಯದಲ್ಲಿ ಭಗವಂತನೇ ಗುರುವಿನ ಹೃದಯದಲ್ಲಿ ಪ್ರಕಟಗೊಳ್ಳುತ್ತಾನೆ; ಅಲ್ಲಿಂದ ಭಗವಂತನೇ ಶಿಷ್ಯನಿಗೆ ಉತ್ತೇಜಿಸುತ್ತಾನೆ. ಭಗವಂತನೇ ನಿಜವಾದ ಗುರು. ಮನುಷ್ಯಮಾತ್ರದವನು ಎಂದಿಗೂ ಗುರುವಾಗಲಾರ.
–ಸ್ವಾಮಿ ಶಿವಾನಂದ

**ಒಂ**ದು ಆದರ್ಶ ಜೀವನದ ದಿವ್ಯಸ್ಪರ್ಶವಿಲ್ಲದೆಯೆ ನಿಮ್ಮ ಜೀವನವನ್ನು ರೂಪಿಸಿಕೊಳ್ಳಲಾರಿರಿ. ಭಾಗವತವು ಸಾಧುಗಳ ಮತ್ತು ಭಗವದ್ಭಕ್ತರ ಸಂಗದ ಮೇಲೆ ವಿಶೇಷವಾದ ಒತ್ತನ್ನು ನೀಡುತ್ತದೆ... ವೇದಾಂತವು ಆಧ್ಯಾತ್ಮಿಕ ಗುರುವಿನ ಮಹತ್ವವನ್ನು ಎತ್ತಿಹಿಡಿದಿದೆ. ಏಕೆಂದರೆ, ಒಂದು ಜೀವಕ್ಕೆ ಬೆಳಕು ತರುವುದಕ್ಕೆ ಇನ್ನೊಂದು ಜೀವದ ಅವಶ್ಯಕತೆ ಇದೆ.
–ಸ್ವಾಮಿ ತುರೀಯಾನಂದ

**ಗು**ರು ಮತ್ತು ಇಷ್ಟದೇವತೆ – ಇಬ್ಬರೂ ಒಂದೆ. ನಿನ್ನ ಗುರುವಿನಲ್ಲಿ ವಿಶ್ವಾಸವಿಡು. ಒಂದು ಹಸುವಿಗೆ ಆಹಾರ ಕೊಟ್ಟರೂ ಸರಿಯೆ ಕೊಡದಿದ್ದರೂ ಸರಿಯೆ, ಅದು ತನ್ನ ಒಡೆಯನನ್ನು ಬಿಟ್ಟು ಬೇರೆಲ್ಲೂ ಹೋಗದು. ಅದರಂತೆಯೇ ಗುರುವಿಗೆ ಅನವರತವೂ ವಿಧೇಯನಾಗಿರು. ಹೀಗೆ ಹೇಳು, "ನಾನು ನಿನ್ನ ಸೇವಕ, ನೀನು ನನ್ನ ಒಡೆಯ."
–ಸ್ವಾಮಿ ಅದ್ಭುತಾನಂದ

**ಯಾ**ರು ಪಂಜನ್ನು ಕೈಯಲ್ಲಿ ಹಿಡಿದಿರುವರೋ ಅವರು ಮಾತ್ರವೇ ಇತರರಿಗೆ ಅದನ್ನು ನೀಡಬಲ್ಲರು. –ಪ್ಲೇಟೋ

**ಪ**ರಿಪೂರ್ಣ ಜ್ಞಾನದ ವಿಶೇಷ ಲಕ್ಷಣವೆಂದರೆ, ಅದನ್ನು ಬೋಧಿಸುವ ಸಾಮರ್ಥ್ಯ. ಮಕ್ಕಳಿಗೆ ಶಿಕ್ಷಣ ಕೊಡುವವರನ್ನು ಪೋಷಕರಿಗಿಂತಲೂ ಹೆಚ್ಚಾಗಿ ಗೌರವಿಸಬೇಕು. ಏಕೆಂದರೆ ಪೋಷಕರು ಒಬ್ಬ ವ್ಯಕ್ತಿಗೆ ಜನ್ಮವನ್ನು ಮಾತ್ರ ಕೊಡುತ್ತಾರೆ. ಆದರೆ ಶಿಕ್ಷಕನು ಅವನಿಗೆ ಬದುಕುವ ಕಲೆಯನ್ನು ಹೇಳಿಕೊಡುತ್ತಾನೆ. –ಅರಿಸ್ಟಾಟಲ್

**ಶಿ**ಕ್ಷಕನಾಗಬಯಸುವ ಪ್ರತಿಯೊಬ್ಬನ ನೈಜ ಧ್ಯೇಯ, ತನ್ನ ಅಭಿಪ್ರಾಯಗಳನ್ನು ಶಿಷ್ಯನ ಮೇಲೆ ಹೇರುವುದಾಗಿರಬಾರದು. ಅದಕ್ಕೆ ಬದಲಾಗಿ, ಶಿಷ್ಯನ ಮನಸ್ಸಿಗೆ ಬೆಳಕು ತರುವುದೇ ಅವನ ಧ್ಯೇಯವಾಗಬೇಕು.
–ಎಫ್. ಎಚ್. ರಾಬರ್ಟ್‌ಸನ್

**ಹೃ**ದಯವೇ ಗುರು, ಕಾಲವೇ ಶಿಕ್ಷಕ, ಜೀವನವೇ ಪುಸ್ತಕ. –ಅನಾಮಿಕ

**ಹ**ರುಷದಿಂದಲಿ ಕಲಿಯುವನು; ಸಂತಸದಿಂದಲಿ ಕಲಿತುದ ಕಲಿಸುವನು.. –ಚಾಸರ್